ಸಾಕ್ಷಿಯ ಹೆಸರುಃ ಶ್ರೀಮತಿ ಎಸ್.ಆರ್. ಕಾಮಾಕ್ಷಿ

ದಿನಾಂಕ 04-11-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರತಿಜ್ಞಾಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯವೆಲ್ಲಾ ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದೆಂದು ಪ್ರಮಾಣಿಸಿ ಹೇಳಿರುತ್ತಾರೆ.

<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಯು.ಎಸ್. ವಕೀಲರಿಂದಃ</u>

1) ದಾವಾ ಐಟಂ ನಂ.1 ಕ್ಕೆ ಸಂಬಂಧಿಸಿದ ಒಂದು ಕೈಬರಹ ಮತ್ತು ಒಂದು ಗಣಕೀಕೃತ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ 1 ಮತ್ತು 2 ಎಂದು,

2) ದಿನಾಂಕಃ 24.07.2003 ರಂದು ದಾವಾ ಐಟಂ ನಂ.1 ನ್ನು ನನ್ನ ತಮ್ಮ ಜಗದೀಶ್ ಬಿನ್ ರಾಮೇಗೌಡ ಹಾಗೂ ಅವರ ಕುಟುಂಬದವರು ಎಸ್.ಎಲ್ ರಾಮಕೃಷ್ಣೇಗೌಡ ಹಾಗೂ ಅವರ ಹೆಂಡತಿ ಗೆ ಮಾರಾಟ ಮಾಡಿದ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-02 ಎಂದು,

3) ನನ್ನ ತಮ್ಮ ಚಂದ್ರಹಾಸ್ ತೀರಿಕೊಂಡಿದ್ದು, ಅವರ ಹೆಂಡತಿ ಉಷಾರವರು ದಿನಾಂಕಃ23.06.2003 ರಂದು ದಾವಾ ಐಟಂ ನಂ.2 ರಿಂದ 4 ನ್ನು ನನ್ನ ತಮ್ಮ ಪ್ರಕಾಶ್ ಬಿನ್ ರಾಮೇಗೌಡ ಹಾಗೂ ಅವರ ಕುಟುಂಬದವರಿಗೆ ಬರೆದುಕೊಟ್ಟ ಹಕ್ಕು ಖುಲಾಸೆ ಪತ್ರದ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ . ಸದರಿ ದಾಖಲೆಯು ಜೆರಾಕ್ಸ್ ಪ್ರತಿಯಾಗಿದ್ದರಿಂದ ಅದನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ.

4) ದಿನಾಂಕಃ15.02.2007 ರಂದು ದಾವಾ ಐಟಂ ನಂ.2 ನ್ನು ಪುಟ್ಟೇಗೌಡ ಬಿನ್ ಮಳಲೇಗೌಡರವರಿಗೆ ನನ್ನ ತಮ್ಮ ಜಗದೀಶ್ ಮತ್ತು ಅವರ ಕುಟುಂಬದವರು ಮಾರಾಟ ಮಾಡಿದ, ನೊಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 03 ಎಂದು,

5) ದಿನಾಂಕಃ 26.11.2004 ರಂದು ದಾವಾ ಐಟಂ ನಂ.3 ನ್ನು ನಾಗರಾಜು ಬಿನ್ ಪುಟ್ಟೇಗೌಡರವರಿಗೆ ನನ್ನ ತಮ್ಮ ಪ್ರಕಾಶ್ ಮತ್ತು ಅವರ ಕುಟುಂಬದವರು ಮಾರಾಟ ಮಾಡಿದ, ನೊಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 04 ಎಂದು,

6) ದಿನಾಂಕಃ 21.05.2004 ರಂದು ದಾವಾ ಐಟಂ ನಂ.4 ನ್ನು ನರಸಿಂಹೇಗೌಡ ಬಿನ್ ನಿಂಗೇಗೌಡರವರಿಗೆ ನನ್ನ ತಮ್ಮ ಪ್ರಕಾಶ್ ಮತ್ತು ಅವರ ಕುಟುಂಬದವರು ಮಾರಾಟ ಮಾಡಿದ, ನೊಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 05 ಎಂದು,

7) ದಿನಾಂಕಃ 26.11.2005 ರಂದು ದಾವಾ ಐಟಂ ನಂ.3 ಮತ್ತು 4 ನ್ನು ನಾಗರಾಜು ಬಿನ್ ಪುಟ್ಟೇಗೌಡರವರಿಗೆ ನರಸಿಂಹೇಗೌಡ ಬಿನ್ ನಿಂಗೇಗೌಡರವರು ಮರು ಮಾರಾಟ ಮಾಡಿದ, ನೊಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 06 ಎಂದು,

8) ದಿನಾಂಕಃ06.02.2020 ರಂದು ಸಾಲಿಗ್ರಾಮ ಪೋಲೀಸರು ನೀಡಿದ ಸ್ವೀಕೃತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 7 ಎಂದು ಗುರುತಿಸಲಾಯಿತು.

ವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.